# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : **1643**
**ಮಾನ್ಯ ವಿಧಾನ ಸಭೆಯ ಸದಸ್ಯರ ಹೆಸರು** : **ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ)**

**ಉತ್ತರಿಸಬೇಕಾದ ದಿನಾಂಕ** : **18.03.2026**
**ಉತ್ತರಿಸುವ ಸಚಿವರು** : **ಕಂದಾಯ ಸಚಿವರು**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಎರಡು ವರ್ಷಗಳಲ್ಲಿ (2022-23 ಮತ್ತು 2023-24) ಕಲಬುರಗಿ ಜಿಲ್ಲೆಯಲ್ಲಿ ಅತಿವೃಷ್ಟಿ ಮತ್ತು ಬರಗಾಲದಿಂದ ಹಾನಿಗೊಳಗಾದ ಬೆಳೆಗಳ ವಿಸ್ತೀರ್ಣ ಎಷ್ಟು;<br>(ತಾಲ್ಲೂಕುವಾರು ಮಾಹಿತಿ ನೀಡುವುದು) | ಕಳೆದ ಎರಡು ವರ್ಷಗಳಲ್ಲಿ (2022-23 ಮತ್ತು 2023-24) ಕಲಬುರಗಿ ಜಿಲ್ಲೆಯಲ್ಲಿ ಅತಿವೃಷ್ಟಿ ಮತ್ತು ಬರಗಾಲದಿಂದ ಕೃಷಿ, ಕಂದಾಯ ಹಾಗೂ ತೋಟಗಾರಿಕೆ ಇಲಾಖೆಯ ಜಂಟಿ ಸಮೀಕ್ಷೆಯ ವರದಿಯ ಅನುಸಾರ<br><br>2022-23 ನೇ ಸಾಲಿನಲ್ಲಿ ಒಟ್ಟು 180869 ಹೆಕ್ಟೇರ್‌ಮತ್ತು 2023-24 ನೇ ಸಾಲಿನಲ್ಲಿ ಒಟ್ಟು 276368 ಹೆಕ್ಟೇರ್‌ಪ್ರದೇಶದಲ್ಲಿ ಬೆಳೆ ಹಾನಿಯಾಗಿರುತ್ತದೆಂದು ವರದಿ ಮಾಡಿರುತ್ತಾರೆ. ಬೆಳೆವಾರು ಹಾನಿಯ ವಿವರ ಅನುಬಂಧ-1 ಮತ್ತು ಅನುಬಂಧ-2 ರಲ್ಲಿ ನೀಡಿದೆ. |
| ಆ) | ಸದರಿ ಜಿಲ್ಲೆಯಲ್ಲಿ ಪರಿಹಾರಕ್ಕಾಗಿ ನೊಂದಾಯಿಸಿಕೊಂಡ ಒಟ್ಟು ರೈತರ ಸಂಖ್ಯೆ ಎಷ್ಟು ಮತ್ತು ಈ ಪೈಕಿ ಎಷ್ಟು ಜನರಿಗೆ ಇದುವರೆಗೆ ಪರಿಹಾರ ವಿತರಿಸಲಾಗಿದೆ;<br>(ಸಂಪೂರ್ಣ ವಿವರ ನೀಡುವುದು) | ಕಳೆದ ಎರಡು ವರ್ಷಗಳಲ್ಲಿ (2022-23 ಮತ್ತು 2023-24) ಕಲಬುರಗಿ ಜಿಲ್ಲೆಯಲ್ಲಿ ಅತಿವೃಷ್ಟಿ ಮತ್ತು ಬರಗಾಲದಿಂದಾಗಿ SDRF / NDRF ಮಾರ್ಗಸೂಚಿಯನ್ವಯ<br><br>2022-23 ನೇ ಸಾಲಿನಲ್ಲಿ ಒಟ್ಟು 255613 ರೈತರಿಗೆ ರೂ.238.24 ಕೋಟಿ ಹಾಗೂ 2023-24ನೇ ಸಾಲಿನಲ್ಲಿ ಮುಂಗಾರು ಅವಧಿಯಲ್ಲಿ ಅತಿವೃಷ್ಟಿಯಿಂದ ಉಂಟಾದ ಬೆಳೆ ಹಾನಿಗೆ ಒಟ್ಟು 12,665 ರೈತರಿಗೆ ರೂ.11.98 ಕೋಟಿ ಮತ್ತು ಖಾರಿಫ್ 2023ರ ಅವಧಿಯಲ್ಲಿ ಬರಗಾಲದಿಂದ ಉಂಟಾದ ಬೆಳೆಹಾನಿಗೆ ಒಟ್ಟು 2,95,731 ರೈತರಿಗೆ ರೂ.361.77 ಕೋಟಿಗಳನ್ನು ನೇರವಾಗಿ ಆಧಾರ್ ಸಂಖ್ಯೆಗೆ ಜೋಡಣೆ ಹೊಂದಿರುವ ಸಂಬಂಧಪಟ್ಟ ರೈತರ ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಮಾಡಲಾಗಿರುತ್ತದೆ. |
| ಇ) | ಕಲಬುರಗಿ ಜಿಲ್ಲೆಯ ಪ್ರಮುಖ ಬೆಳೆಯಾದ ತೊಗರಿ (Red Gram) ಬೆಳೆಗೆ ತಗುಲಿದ ನೆಟೆ ರೋಗ ಹಾಗೂ ಹವಾಮಾನ ವೈಪರೀತ್ಯದಿಂದಾದ ಹಾನಿಗೆ ಜಿಯೋ-ಟ್ಯಾಗಿಂಗ್ ಸಮೀಕ್ಷೆ ಪೂರ್ಣಗೊಂಡಿದೆಯೇ; ಪೂರ್ಣಗೊಂಡಿದ್ದಲ್ಲಿ ಬಿಡುಗಡೆಯಾದ ಅನುದಾನವೆಷ್ಟು? | ಕಲಬುರಗಿ ಜಿಲ್ಲೆಯಲ್ಲಿ 2022-23ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ 181870.0 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾದ ತೊಗರಿ ಬೆಳೆ ನೆಟೆ ರೋಗದಿಂದ ಹಾನಿಯಾಗಿದ್ದು, ಹಾನಿಗೊಳಗಾದ ರೈತರ ನೆರವಿಗೆ ಧಾವಿಸಿ "ವಿಶೇಷ ಪ್ರಕರಣ"ವೆಂದು ರಾಜ್ಯ ಸರ್ಕಾರ ತೀರ್ಮಾನಿಸಿ, ಬಾಧಿತ ಪ್ರದೇಶದ ರೈತರಿಗೆ ಪ್ರತಿ ಹೆಕ್ಟೇರ್‌ಗೆ ರೂ.10,000/- ರಂತೆ ಗರಿಷ್ಠ 2 ಹೆಕ್ಟೇರ್‌ಗೆ ಸೀಮಿತಗೊಳಿಸಿ ಎನ್.ಡಿ.ಆರ್.ಎಫ್/ಎಸ್.ಡಿ.ಆರ್.ಎಫ್ ಮಾರ್ಗಸೂಚಿಯಂತೆ 2023-24ನೇ ಸಾಲಿನಲ್ಲಿ 193527 ಅರ್ಹ ರೈತ ಫಲಾನುಭವಿಗಳಿಗೆ ರೂ.18187.00 ಲಕ್ಷಗಳನ್ನು ಬ್ಯಾಂಕ್ ಖಾತೆಗಳಿಗೆ ಕೇಂದ್ರೀಕೃತ ನೇರ ನಗದು ವರ್ಗಾವಣೆಯನ್ನು ಮಾಡಲಾಗಿರುತ್ತದೆ. |

**ಕಂಇ 219 ಟಿಎನ್‌ಆರ್ 2026**

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು

ಸಂ (ಪ್ರ) ಸಂ: 1499(1643) ಕ್ಕೆ ಅನುಬಂಧ-1

## Annexure 5 C

**Crop Wise /Taluk wise Details of Agriculture Crops affected land loss due to Heavy rains during Aug, Sept & Oct-2022 (Area in Hectares)**

| Sl. No | District / Taluk | Kalaburagi | | | | | | | |
|---|---|---|---|---|---|---|---|---|---|
| | **Taluk** | **Greengram** | **Blackgram** | **Redgram** | **Cotton** | **Maize** | **Sunflower** | **Soyabean** | **Total area affecte** |
| 1 | Afzalapur | 110 | 112 | 16066 | 3504 | 265 | 196 | 24 | **20277** |
| 2 | Aland | 2300 | 946 | 17184 | 0 | 0 | 0 | 1335 | **21765** |
| 3 | Chincholi | 2276 | 2068 | 10772 | 145 | 0 | 0 | 1210 | **16471** |
| 4 | Chittapur | 2431 | 804 | 16201 | 1423 | 0 | 0 | 0 | **20859** |
| 5 | Kalaburagi | 557 | 538 | 14694 | 1672 | 35 | 400 | 1156 | **19052** |
| 6 | Kamalapur | 714 | 874 | 6243 | 0 | 0 | 0 | 2762 | **10593** |
| 7 | Kalagi | 1930 | 1180 | 10913 | 9 | 0 | 0 | 1165 | **15197** |
| 8 | Jewaragi | 15 | 2 | 9844 | 9292 | 0 | 10 | 10 | **19173** |
| 9 | Sedam | 590 | 215 | 18325 | 70 | 0 | 0 | 0 | **19200** |
| 10 | Shahabad | 85 | 60 | 2756 | 240 | 0 | 0 | 15 | **3156** |
| 11 | Yedrami | 15 | 2 | 6972 | 8117 | 0 | 15 | 5 | **15126** |
| | **Total** | **11023** | **6801** | **129970** | **24472** | 300 | 621 | **7682** | **180869** |

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1499(1643) ಕ್ಕೆ ಅನುಬಂಧ-2

**Annexure 5C**

**Estimated loss to Horticulture / Agriculture/Sericulture/Plantation Crops affected due to Kharif Drought 2023 ( Area in Hectares )**

| Sl.No | Taluk | Redgram | Greengram | Blackgram | Soyabean | Sugurcane | Cotton | Sunflower | Maize | Total |
|---|---|---|---|---|---|---|---|---|---|---|
| 1 | Afzalapur | 21733 | 0 | 0 | 0 | 12150 | 6042 | 75 | 150 | 40150 |
| 2 | Aland | 28525 | 179 | 424 | 10432 | 3775 | 0 | 398 | 0 | 43733 |
| 3 | Chincholi | 17247 | 386 | 3243 | 2537 | 0 | 0 | 0 | 0 | 23413 |
| 4 | Chittapur | 16897 | 0 | 496 | 0 | 0 | 5214 | 0 | 0 | 22607 |
| 5 | Kalaburagi | 23280 | 0 | 51 | 95 | 456 | 2757 | 50 | 0 | 26689 |
| 6 | Kalagi | 18176 | 0 | 567 | 265 | 0 | 143 | 0 | 0 | 19151 |
| 7 | Kamalapur | 14976 | 0 | 323 | 2874 | 252 | 0 | 0 | 0 | 18425 |
| 8 | Jewaragi | 16329 | 0 | 0 | 0 | 3509 | 11748 | 0 | 0 | 31586 |
| 9 | Shahabad | 6371 | 0 | 15 | 0 | 0 | 354 | 0 | 0 | 6740 |
| 10 | Sedam | 20590 | 0 | 735 | 0 | 0 | 40 | 0 | 0 | 21365 |
| 11 | Yedrami | 10845 | 0 | 0 | 0 | 2257 | 9407 | 0 | 0 | 22509 |
| | Total | **194969** | **565** | **5854** | **16203** | **22399** | **35705** | **523** | **150** | **276368** |